# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2009-2010ರ ಸಾಲಿನ ಎರಡು ವರ್ಷಗಳ ಬ್ಲಾಕ್ ಅವಧಿಗೆ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗಧೀಕರಣ ಸೌಲಭ್ಯವನ್ನು ನಿಯತಗೊಳಿಸುವ ಬಗ್ಗೆ.

****

ಪ್ರಸ್ತಾವನೆ:

ದಿನಾಂಕ 01.01.2009ರಿಂದ ದಿ:31.12.2010ರವರೆಗಿನ ಎರಡು ವರ್ಷಗಳ ಬ್ಲಾಕ್ ಅವಧಿಗೆ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಸೌಲಭ್ಯ ಪಡೆಯುವುದನ್ನು ನಿಯತಗೊಳಿಸುವುದು ಅವಶ್ಯಕವೆಂದು ಸರ್ಕಾರವು ಈ ಬಗ್ಗೆ ಪರಿಶೀಲಿಸಿ ಕೆಳಗಿನಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ಆಇ 8 ಸೇನಿಸೇ 2008
## ಬೆಂಗಳೂರು, ದಿನಾಂಕ:16.05.2009.

2009-10ರ ಎರಡು ವರ್ಷಗಳ ಬ್ಲಾಕ್ ಅವಧಿಗೆ ಗಳಿಕೆ ರಜೆಯನ್ನು ಅಧ್ಯರ್ಪಣ ಮಾಡಿ ನಗದೀಕರಣ ಸೌಲಭ್ಯ ಪಡೆಯುವ ಯೋಜನೆಯನ್ನು ದಿ: 01.05.2009ರಿಂದ ಜಾರಿಗೊಳಿಸಿ ಈ ಕೆಳಕಂಡಂತೆ ನಿಯತಗೊಳಿಸಲಾಗಿದೆ.

2. 2009-2010ರ ಎರಡು ವರ್ಷಗಳ ಬ್ಲಾಕ್ ಅವಧಿಗೆ ತಮ್ಮ ಗಳಿಕೆಯ ರಜೆಯನ್ನು ಅಧ್ಯರ್ಪಿಸಿ ಅದಕ್ಕೆ ಬದಲಾಗಿ ನಗದನ್ನು ಪಡೆಯಲಿಚ್ಛಿಸುವ ಈ ಕೆಳಕಂಡ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ನೌಕರರು, ಅವರು ಅರ್ಜಿ ಸಲ್ಲಿಸಿದ ದಿನಾಂಕದಿಂದ ಒಂದು ತಿಂಗಳ ತರುವಾಯ ಅಥವಾ ಅವರ ವೇತನ ಶ್ರೇಣಿಯ ಮುಂದೆ ಸೂಚಿಸಿರುವ ಅವಧಿ ಯಾವುದೋ ನಂತರ ಬರುವುದೋ ಆ ತಿಂಗಳಲ್ಲಿ ನಗದೀಕರಣ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

| ಕ್ರಮ ಸಂಖ್ಯೆ | ವೇತನ ಶ್ರೇಣಿ ರೂ. | ಮುಂಚಿತವಾಗಿ ಒಂದು ತಿಂಗಳ ನೋಟಿಸ್ ನೀಡಿ 2009-2010ರ ಬ್ಲಾಕ್ ಅವಧಿಗೆ ನಗಧೀಕರಣ ಸೌಲಭ್ಯ ಪಡೆಯುವ ಅವಧಿ |
|---|---|---|
| 1 | 4800-7275ರಿಂದ 6800-13000ರವರೆಗೆ | ಮೇ 2009ರ ನಂತರ (ದಿ:1-6-2009 ರಿಂದ ದಿ:31-12-2010 ರವರೆಗೆ) |
| 2 | 7275-13350ರಿಂದ 28275-39900ರವರೆಗೆ | ಮೇ 2010ರ ನಂತರ (ದಿ:1-6-2010 ರಿಂದ ದಿ:31-12-2010 ರವರೆಗೆ) |

3. ಆದಾಗ್ಯೂ ಕಂಡಿಕೆ 2ರಲ್ಲಿ ತಿಳಿಸಿರುವುದು ಏನೇ ಇದ್ದಾಗ್ಯೂ ಈ ಬ್ಲಾಕ್ ಅವಧಿಯಲ್ಲಿ ಗಳಿಕೆ ರಜೆಯನ್ನು ಬಿಟ್ಟುಕೊಡುವ ಮತ್ತು ನಗದೀಕರಣ ಸೌಲಭ್ಯವನ್ನು ಪಡೆಯಲು ಅರ್ಹರಿದ್ದು, ಸದರಿ ಅವಧಿಯಲ್ಲಿ ನಿವೃತ್ತಿ ಹೊಂದುವ ಸರ್ಕಾರಿ ನೌಕರರು ಎರಡನೇ ಕಂಡಿಕೆಯ ಕೋಷ್ಟಕದಲ್ಲಿ ಅವರ ವೇತನ ಶ್ರೇಣಿಯ ಮುಂದೆ ಸೂಚಿಸಿರುವ

ಅವಧಿಯಲ್ಲಿ ಅಥವಾ ಅವರ ಸೇವೆಯ ಕೊನೆಯ ತಿಂಗಳಲ್ಲಿ ಇದರಲ್ಲಿ ಯಾವುದು ಮೊದಲೋ ಆ ತಿಂಗಳಲ್ಲಿ ನಗದೀಕರಣ ಪ್ರಯೋಜನ ಪಡೆಯಲು ಅರ್ಹರಾಗಿರುತ್ತಾರೆ.

4. ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣಕ್ಕಾಗಿ ನಿರ್ದಿಷ್ಟಪಡಿಸಿದ ಅವಧಿಯ ಪೂರ್ವದಲ್ಲಿ ಯಾವ ಸರ್ಕಾರಿ ನೌಕರನ ಗಳಿಕೆ ರಜೆಯ ಲೆಕ್ಕದಲ್ಲಿ ಗರಿಷ್ಟ ಮೊತ್ತದ 240 ದಿನಗಳು ಮೀರುತ್ತದೆಯೋ ಅಂತಹ ಪ್ರಕರಣಗಳಲ್ಲಿ ಮೇಲಿನ ಕಂಡಿಕೆ 2ರಲ್ಲಿನ ಕೋಷ್ಟಕದಲ್ಲಿ ನಮೂದಿಸಿರುವ ಅವಧಿಯ ಬದಲಾಗಿ, ಗರಿಷ್ಟ ಮೊತ್ತದ 240 ದಿನಗಳ ಗಳಿಕೆ ರಜೆ ಮೀರುವ ತಿಂಗಳಿನ ತಕ್ಷಣದ ಹಿಂದಿನ ತಿಂಗಳಿನಲ್ಲಿ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಿಸಲು ಅನುಮತಿಸಲಾಗಿದ್ದು, ಸಂಬಂಧಪಟ್ಟ ವರ್ಷದ ಬ್ಲಾಕ್ ಅವಧಿಯ ಜೂನ್ ತಿಂಗಳ ಅವಧಿಯಲ್ಲಿ (ನ್ಯಾಯಾಂಗ ಇಲಾಖೆಯ ಸಿಬ್ಬಂದಿ ವರ್ಗದವರಿಗೆ ಸಂಬಂಧಿಸಿದಂತೆ ಮೇ ತಿಂಗಳ ಕೊನೆಯಲ್ಲಿ) ಅಥವಾ ಡಿಸೆಂಬರ್ ತಿಂಗಳ ಕೊನೆಯಲ್ಲಿ ಅಂದರೆ ಜೂನ್ 2009, ಡಿಸೆಂಬರ್ 2009ರ ಕೊನೆಯಲ್ಲಿ ಪಡೆಯಲು ಅರ್ಹರಾಗಿರುತ್ತಾರೆ. ದಿ:31.05.2009ರಂದು ಅಥವಾ ಅದಕ್ಕೆ ಮೊದಲು ಅರ್ಜಿ ಸಲ್ಲಿಸಿರುವ ನ್ಯಾಯಾಂಗ ಇಲಾಖೆಯ ನೌಕರರ ಲೆಕ್ಕದಲ್ಲಿ ದಿ:01.06.2009ರಂದು 240 ದಿನಗಳಿಗಿಂತ ಹೆಚ್ಚು ಗಳಿಕೆ ರಜೆ ಮೀರುವ ಸಂದರ್ಭದಲ್ಲಿ ಮಾತ್ರ ಈ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಈ ಅವಕಾಶದಿಂದಾಗಿ ಗಳಿಕೆ ರಜೆ ನಗದೀಕರಣ ಸೌಲಭ್ಯವು ಒಂದು ಬ್ಲಾಕ್ ಅವಧಿಗೆ ಸೀಮಿತಗೊಳಿಸಿರುವ 30 ದಿನಗಳ ಗರಿಷ್ಟ ಮಿತಿಯನ್ನು ಆಯಾ ಬ್ಲಾಕ್ ಅವಧಿಯಲ್ಲಿ ಯಾವುದೇ ಕಾರಣಕ್ಕೂ ಮೀರತಕ್ಕದಲ್ಲ. ಅಂದರೆ ಎರಡು ವರ್ಷಗಳ ಬ್ಲಾಕ್ ಅವಧಿಯಲ್ಲಿ ಒಮ್ಮೆ ಮಾತ್ರ ಗರಿಷ್ಟ 30 ದಿನಗಳ ಗಳಿಕೆ ರಜೆ ನಗದೀಕರಣ ಪಡೆಯಲು ಅವಕಾಶವಿರುತ್ತದೆ.

5. ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಗಳ ನಿಯಮ 118ರಲ್ಲಿ ನಿಯಮಿಸಿರುವಂತಹ ಗಳಿಕೆ ರಜೆ ನಗದೀಕರಣ ನಿಯಂತ್ರಣಕ್ಕೆ ಸಂಬಂಧಿಸಿದ ಇತರೇ ಷರತ್ತುಗಳು ಅನ್ವಯವಾಗುತ್ತದೆ.

6. ಈ ಆದೇಶವು ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಸಂಸ್ಥೆಗಳ ನೌಕರರಿಗೂ ಅನ್ವಯಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಪಿ.ನಾರಾಯಣ)**
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು-1).

**ಪ್ರತಿ:**

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳಿಗೆ.
2. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು/ವಿಶೇಷ ಕಾರ್ಯದರ್ಶಿಗಳು ಅಪರ ಕಾರ್ಯದರ್ಶಿಗಳು/ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳಿಗೆ ಹಾಗೂ ಅಧೀನ ಕಾರ್ಯದರ್ಶಿಗಳಿಗೆ.

3. ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ.
5. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
6. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
7. ಮಹಾಲೇಖಪಾಲರು (ಲೆಕ್ಕಪತ್ರ:ಲೆಕ್ಕ ಪರಿಶೋಧನೆ: ಜಿ.ಎಂ.ಶಾಖೆ),ಕರ್ನಾಟಕ, ಬೆಂಗಳೂರು.
8. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು.
9. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
10. ರಿಜಿಸ್ಟ್ರಾರ್, ಕರ್ನಾಟಕ ಲೋಕಯುಕ್ತ, ಬೆಂಗಳೂರು.
11. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
12. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತು, ಬೆಂಗಳೂರು.
13. ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು.

(Items 7–13: ಪತ್ರದೊಂದಿಗೆ)

14. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
15. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು
16. ಕರ್ನಾಟಕ ಸರ್ಕಾರಿ ಸಚಿವಾಳಯದ ಎಲ್ಲಾ ಶಾಖೆಗಳು.
17. ಕರ್ನಾಟಕ ಸರ್ಕಾರಿ ಸಚಿವಾಲಯ ಗ್ರಂಥಾಲಯ; ವಿಧಾನ ಮಂಡಲ ಗ್ರಂಥಾಲಯ
18. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ (ಎಲ್ಲಾ ಜಿಲ್ಲಾ ಖಜಾನೆಗಳು).
19. ವಾರಪತ್ರ.